||ಜೈ ಶ್ರೀ ಗುರುದೇವ್||
ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ)
ಶ್ರೀ ಆದಿಚುಂಚನಗಿರಿ ಕ್ಷೇತ್ರ-571 811, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.
ಇಮೇಲ್- bgsceo@gmail.com. ಕಛೇರಿ ದೂರವಾಣಿ ಸಂಖ್ಯೆ: 08234-288234, 9448665715

# ಬೋಧಕ ಹುದ್ದೆಗಳ ನೇಮಕಾತಿ ಪ್ರಕಟಣೆ

ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್(ರಿ)ನ ಆಡಳಿತಕ್ಕೆ ಒಳಪಟ್ಟಿರುವ ನಾಗಮಂಗಲ(ಮಂಡ್ಯ ಜಿಲ್ಲೆ) ಮತ್ತು ಚನ್ನರಾಯಪಟ್ಟಣದ(ಹಾಸನ ಜಿಲ್ಲೆ) ಎರಡು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿಯಿರುವ ಈ ಕೆಳಕಂಡ ಅನುದಾನಿತ (ಪಿಂಚಣಿತ ರಹಿತ) ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಿ ಆದೇಶ ಸಂಖ್ಯೆ: ಇಡಿ/158/ಯುಪಿಸಿ 2018, ದಿನಾಂಕ: 15-07-2019, ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು, ಅವರ ಪತ್ರ ಸಂಖ್ಯೆ: ಕಾಶಿಇ/66/ಖಾಹುಭ/ಮೈವಿ/2018-19/ನೇ.ವಿ-2, ದಿನಾಂಕ:26-07-2019 ಮತ್ತು ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಪತ್ರದ ಸಂಖ್ಯೆ: ಪ್ರಾಕಮೈ/ಕಾಶಿಇ/446/49/ಖಾಹುಭ/2011-12 (ಭಾಗ-2) ದಿನಾಂಕ:07-08-2019 ಪ್ರಕಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ವಿಷಯ | ಹುದ್ದೆಗಳ ಸಂಖ್ಯೆ | ಮೀಸಲಾತಿ |
|---|---|---|---|
| 1 | ಕನ್ನಡ | 02 | ಪ.ಜಾ - 01,ಸಾ.ಅ - 01 |
| 2 | ಆಂಗ್ಲ ಭಾಷೆ | 01 | ಪ.ಜಾ - 01 |
| 3 | ಸಮಾಜಶಾಸ್ತ್ರ | 02 | ಪ.ಜಾ - 01, ಸಾ.ಅ - 01 |
| 4 | ಇತಿಹಾಸ | 01 | ಪ.ಜಾ - 01 |
| 5 | ಭೂಗೋಳಶಾಸ್ತ್ರ | 01 | ಪ.ಜಾ - 01 |
| 6 | ರಸಾಯನಶಾಸ್ತ್ರ | 01 | ಸಾ.ಅ - 01 |
| 7 | ಪ್ರಾಣಿಶಾಸ್ತ್ರ | 01 | ಸಾ.ಅ - 01 |
| 8 | ವಾಣಿಜ್ಯಶಾಸ್ತ್ರ | 03 | ಪ.ಜಾ - 01, ಪ.ಪಂ - 01<br>ಸಾ.ಅ - 01 |
| 9 | ದೈಹಿಕ ಶಿಕ್ಷಣ ಬೋಧಕರು | 02 | ಪ.ಜಾ - 01, ಸಾ.ಅ - 01 |
| 10 | ಗ್ರಂಥಪಾಲಕರು | 02 | ಪ.ಜಾ - 01, ಸಾ.ಅ - 01 |

**ಅಭ್ಯರ್ಥಿಗಳಿಗೆ ಸೂಚನೆ:-**

1. ಅರ್ಜಿಯನ್ನು ತಮ್ಮ ಪೂರ್ಣ ಸ್ವವಿವರ (ಕನ್ನಡ ಅಥವಾ ಇಂಗ್ಲೀಷ್) ಮತ್ತು ತಮ್ಮ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ದೃಢೀಕೃತ ಪ್ರತಿಗಳು ಹಾಗೂ ಮೀಸಲಾತಿ ಬಯಸುವ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಹಿಂದುಳಿದ ವರ್ಗಗಳು) ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಗಳಿಂದ ಪಡೆದುಕೊಂಡಿರುವ ಪ್ರಮಾಣ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿಗಳೊಂದಿಗೆ ರೂ. 1000/- ಗಳ ರಾಷ್ಟ್ರೀಕೃತ ಬ್ಯಾಂಕಿನಲ್ಲಿ The President, Sri Adichunchanagiri Shikshana Trust(R.), **ಇವರ ಹೆಸರಿನಲ್ಲಿ ಡಿಡಿ ತೆಗೆದು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಕಛೇರಿ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್(ರಿ), ಬಿ.ಜಿ.ಎಸ್.ಐ.ಟಿ ಕ್ಯಾಂಪಸ್, ಬಿ.ಜಿ.ನಗರ-571448, ನಾಗಮಂಗಲ ತಾಲ್ಲೂಕು, ಮಂಡ್ಯ** ಜಿಲ್ಲೆ, ಇಲ್ಲಿಗೆ ದಿನಾಂಕ **05-10-2019ರೊಳಗೆ** ರಿಜಿಸ್ಟರ್ ಅಥವಾ ಸ್ಪೀಡ್ ಪೋಸ್ಟ್ ಮೂಲಕ ತಲುಪಿಸುವುದು.
2. **ವಯಸ್ಸು: ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಕನಿಷ್ಠ ವಯೋಮಿತಿ 22 ವರ್ಷಗಳು,** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಗರಿಷ್ಠ 45 ವರ್ಷಗಳು, **II(A), II(B), III(A), III(B)** ಹಾಗೂ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಗರಿಷ್ಠ 43 ವರ್ಷಗಳು ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷಗಳಿಗೆ ಮೀರಿರಬಾರದು. ದಿನಾಂಕ 13-12-2018ರ ಸಂಖ್ಯೆ:ಇಡಿ/87/ಯುಪಿಸಿ/2016 ಸರ್ಕಾರದ ಸೇರ್ಪಡೆ ಆದೇಶದನ್ವಯ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಅಭ್ಯರ್ಥಿಗಳಿಗೆ ಮೇಲಿನಂತೆ ಗರಿಷ್ಠ ವಯೋಮಿತಿಯನ್ನು ನಿಗಧಿಪಡಿಸುವುದರೊಂದಿಗೆ ಅವರು ಬೋಧನಾಭುವ ಹೊಂದಿರುವ ಸೇವಾವಧಿ ಅಥವಾ 5 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಗೆ ಅಭ್ಯರ್ಥಿಗಳ ಬೋಧನಾನುಭವದ ದಾಖಲೆಗಳನ್ನು ಪ್ರಾದೇಶಿಕ ಜಂಟಿ ನಿರ್ದೇಶಕರು ದೃಢೀಕರಿಸಿಕೊಂಡು ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿಯನ್ನು ಪರಿಗಣಿಸಲಾಗುವುದು.
3. **ವಿದ್ಯಾರ್ಹತೆ:** ಸಂಬಂಧಪಟ್ಟ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಮತ್ತು ಅಂಗವಿಕಲ ಅಭ್ಯರ್ಥಿಗಳು ಕನಿಷ್ಠ 50% ಮತ್ತು ಸಾಮಾನ್ಯ ವರ್ಗದ ಅಭ್ಯಥಿಗಳು ಕನಿಷ್ಠ 55% ಅಂಕಗಳನ್ನು ಪಡೆದು ತೇರ್ಗಡೆಯಾಗಿರಬೇಕು. ಹಾಗೂ ಎನ್.ಇ.ಟಿ ಮತ್ತು ಎಸ್.ಎಲ್.ಇ.ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕೋರ್ಸ್‌ವರ್ಕ್ ಮೂಲಕ ಪಿ.ಹೆಚ್‌ಡಿ ಪದವಿ ಪಡೆದ ಅಭ್ಯರ್ಥಿಗಳಿಗೆ ಎನ್.ಇ.ಟಿ ಮತ್ತು ಎಸ್.ಎಲ್.ಇ.ಟಿ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುವುದು. ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಯುಜಿಸಿ ನಿಯಮ/ಮಾರ್ಗದರ್ಶನದ ಪ್ರಕಾರ ಅರ್ಹತೆಯನ್ನು ನಿರ್ಧರಿಸಲಾಗುವುದು.
4. ವೇತನ ಶ್ರೇಣಿ ಮತ್ತು ಇತರ ನಿಬಂಧನೆಗಳು: ಯುಜಿಸಿ ನಿಯಮಾವಳಿ ಮತ್ತು ಕರ್ನಾಟಕ ಸರ್ಕಾರದ ನಿಯಮಾವಳಿಗಳನ್ವಯ ಇರುತ್ತದೆ.
5. ಈಗಾಗಲೇ ಸರ್ಕಾರಿ/ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ತಾವು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರವನ್ನು ಒದಗಿಸುವುದು.
6. ಅಪೂರ್ಣವಾದ ಹಾಗೂ ಕಡೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
7. ಅರ್ಜಿ ಸಲ್ಲಿಸಿರುವುದು ನೇಮಕಾತಿಗೆ ಹಕ್ಕೆಂದು ಪರಿಗಣಿಸಲಾಗುವುದಿಲ್ಲ.
8. ಅರ್ಜಿದಾರರು ಒಂದು ನಕಲು ಪ್ರತಿಯನ್ನು ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು-570 005 ಇವರಿಗೆ ಕಳುಹಿಸಬೇಕು.
9. ಸಂದರ್ಶನದ ದಿನಾಂಕ ಪ್ರತ್ಯೇಕವಾಗಿ ತಿಳಿಸಲಾಗುವುದು. ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳಿಗೆ ಯಾವುದೇ ಪ್ರಯಾಣ/ದಿನಭತ್ಯೆ ನೀಡಲಾಗುವುದಿಲ್ಲ.

**ಸೂಚನೆ:** ಮೇಲ್ಕಂಡ ಎಲ್ಲಾ ಮಾಹಿತಿಗಳು ಸಂಬಂಧಪಟ್ಟ ಕಾಲೇಜುಗಳ ವೆಬ್‌ಸೈಟ್ www.saccngm.org ಮತ್ತು www. safgccrp.org ನಲ್ಲಿ ದೊರೆಯುತ್ತದೆ.

ಸಹಿ/-
ಅಧ್ಯಕ್ಷರು
ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್(ರಿ)